ಸಿಸಿ ನಂಃ 2554/2022

ಸಿ ಡಬ್ಲೂ-1/ಪಿ.ಡಬ್ಲೂ 1

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ** 2554/2022

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಈಶ್ವರ ಚಲವಾದಿ |
| ತಂದೆಯ ಹೆಸರು | ಃ | ಹನುಮಂತಪ್ಪ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಕ್ಯಾನಟ್ರಾಕ್ಟರ |
| ವಾಸ ಸ್ಥಳ | ಃ | ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 06-03-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಮ್ಮ ಮನೆ ಕಳ್ಳತನ ಆಗಿರುತ್ತದೆ ಎಂದು ನಾನೇ ದೂರು ನೀಡಿರುತ್ತೇನೆ . ನಮ್ಮ ಮನೆ ಸತ್ತೂರಿನ ಉದಯಗಿರಿ ರಸ್ತೆಯ ಕೆ ಎಚ್ ಬಿ ಕಾಲನಿಯಲ್ಲಿ ಇರುತ್ತದೆ. 06-02-2020 ರಂದು ಗುಲಬರ್ಗಾದಲ್ಲಿ ನಡೆಯು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮನೆಯನ್ನು ಕೀಲಿ ಹಾಕಿಕೊಂಡು ಹೋಗಿದ್ದೇವು. 3 ದಿನ ನಂತರ ಧಾರವಾಡಕ್ಕೆ ಬಂದಿರುತ್ತೇನೆ. ನಮ್ಮ ಹಿತ್ತಲುಬಾಗಿಲಿಗೆ ಹಾಕಿದ ಗ್ರೀಲ್ನ ಕೀಲಿಯನ್ನು ಯಾರೋ ಮೀಟಿ ಮುರಿದು ಹಿತ್ತಲಿನ ಬಾಗಿಲಿನಿಂದ ಮನೆಯ ಒಳಗಡೆ ಹೋಗಿ ಬೆಡ್ಡರೂಮಿನಲ್ಲಿರುವ ಕಬ್ಬಿಣದ ಕಪಾಟಿನ ಸೇಫಲಾಕರನ್ನು ಮುರಿದು ಒಟ್ಟು 7 ಬಂಗಾರದ ವಸ್ತುಗಳು ಹಾಗೂ ಒಂದು ಬ್ಯಾಂಕಿನ ಸೇಫಲಾಕರ ಕೀ ಕಳು ಆಗಿದ್ದವು.

1) ಒಂದು ಬಂಗಾರದ ಕರಮಣಿ ಪೋಣಿಸಿದ ಸರ 25 ಗ್ರಾಂ.

2) ಒಂದು ಬಂಗಾರದ ಪದಕ 06 ಗ್ರಾಂ.

3) ಒಂದು ಬಂಗಾರದ ಉಂಗರು ಹಸಿರು ಬಣ್ಣದ್ದು ಹರಳಿನದ್ದು (ಹೆಣ್ಣು ಮಕ್ಕಳದ್ದು) 05 ಗ್ರಾಂ.

4) ಒಂದು ಬಂಗಾರದ ಉಂಗುರ ನೀಲಿ ಬಣ್ಣದ್ದು ಹರಳಿದನದ್ದು (ಹೆಣ್ಣು ಮಕ್ಕಳದ್ದು) 05 ಗ್ರಾಂ.

5) ಒಂದು ಜೊತೆ ಬಂಗಾರದ ಕಿವಿಯೊಲೆ ಬಿಳಿ ಬಣ್ಣದ್ದು 6 ಗ್ರಾಂ.

6) ಒಂದು ಜೊತೆ ಬಂಗಾರದ ಕಿವಿಯೊಲೆ 06 ಗ್ರಾಂ.

7) ಒಂದು ಬಂಗಾರದ ಸರ 15 ಗ್ರಾಂ.

8) ಒಂದು ಎಸ್ ಬಿ ಐ ಸೇಫ್ಟಿ ಲಾಕರ್ .

ಈ ಎಲ್ಲಾ ಬಂಗಾರದ ಆಭರಣದ ಕಿಮ್ಮತ್ತು ರೂ.2 ಲಕ್ಷ ಚಿಲ್ಲರೆ ಹಾಗೂ ಒಟ್ಟು 68 ಗ್ರಾಂಲ ಬಂಗಾರ ಇತ್ತು. ಸದರಿ ಕಳ್ಳತನವು ಮನೆ ಕೀಲಿ ಹಾಕಿಕೊಂಡು ಹೋದಾಗ ಕಳ್ಳತನ ವಾಗಿತ್ತು. ನಾವು ದೂರನ್ನು 2-3 ದಿನಗಳ ನಂತರ ನೀಡಿರುತ್ತೆವೆ. ಈಗ ನೋಡುತ್ತಿರುವ ದಾಖಲೆಗೆ ನಾನು ನೀಡಿದ ದೂರಾಗಿದ್ದು ಅದಕ್ಕೆ ಸಹಿ ಮಾಡಿರುತ್ತೆನೆ. ದೂರನ್ನು ನಿ.ಪಿ.1 ಎಂದು ಗುರುತಿಸಲಾಯಿತು.

ಕಳುವಾದ ಸ್ಥಳವನ್ನು ನಾನೆ ತೋರಿಸಿರುತ್ತೆನೆ. ಪೊಲೀಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಹಾಗೂ 3 ಪೋಟೊಗಳನ್ನು ತೆಗೆದಿರುತ್ತಾರೆ. ಪಂಚನಾಮೆಯನ್ನು ನಿ.ಪಿ.2 ಎಂದು, ಪೋಟೊವನ್ನು ನಿ.ಪಿ.3 ರಿಂದ 5 ಎಂದು ಗುರುತಿಸಲಾಯಿತು. ಪೋಲೀಸರು ಪಂಚನಾಮೆಯ ಕಾಲಕ್ಕೆ ಮನೆಯ ಹಿತ್ತಲಿನ ಗ್ರೀಲ್ ಗೆ ಹಾಕಿದ ಹಿತ್ತಾಳೆಯ ನಮೂನೆಯ ಕೀಲಿಯನ್ನು ಜಪ್ತು ಮಾಡಿರುತ್ತಾರೆ. ಕೀಲಿಯನ್ನು ನೋಡಿದರೆ ಗುರುತಿಸುತ್ತೆನೆ. ದೂರು ನೀಡಿದ 10 ದಿನಗಳ ನಂತರ ಕಳ್ಳ ಮತ್ತು ಕಳ್ಳತನವಾದ 6 ಒಡವೆಗಳು ಸಿಕ್ಕಿರುತ್ತಾನೆ ಎಂದು ಹೇಳಿದರು. ಪೋಲೀಸರು ನನಗೆ ಪೊಲೀಸ ಠಾಣೆಯಲ್ಲಿ

ತೋರಿಸಿರುತ್ತಾರೆ. ಅವರ ಹೆಸರು ನಿಂಗಪ್ಪ, ಕಲ್ಲಯ್ಯಾ ಮತ್ತು ಪ್ರಶಾಂತ ಎಂದು ಹೇಳಿರುತ್ತಾರೆ. ಅವರು ನಾಲ್ಕು ಜನ ಸೇರಿ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. 4 ನೇ ಕಳ್ಳನ ಹೆಸರು ಮಂಜುನಾಥ ಎಂದು ಹೇಳಿದರು. ಪೊಲೀಸರು ಜಪ್ತು ಮಾಡಿದ 6 ವಸ್ತಗಳನ್ನು ಆರೋಪಿತರಿಂದ ಜಪ್ತು ಮಾಡಿದಾಗಿ ತೋರಿಸಿದಾಗ ನಾನು ಅವುಗಳನ್ನು ನಮ್ಮವು ಎಂದು ಗುರುತಿಸಿರುತ್ತೇನೆ. ಸದರಿ 3 ಆರೋಪಿತರನ್ನು ಹಾಗೂ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಪೋಟೊಗಳಲ್ಲಿ ನನ್ನ ಮನೆಯಿಂದ ಕಳ್ಳತನ ಮಾಡಿದ 6 ಆಭರಣಗಳು ಆಗಿರುತ್ತದೆ. ಸದರಿ ಪೋಟೋಗಳನ್ನು ನಿ.ಪಿ.6 ಮತ್ತು 7 ಎಂದು ಗುರುತಿಸಲಾಯಿತು. ಆ ಬಗ್ಗೆ ದಿಃ 20-02-2020 ರಂದು ಹೇಳಿಕೆಯನ್ನು ನೀಡಿರುತ್ತೇನೆ. ಅಂದಾಜು 15 ದಿವಸದ ನಂತರ ಪೊಲಿಸರು ಇನ್ನೊಬ್ಬ ಆರೋಪಿತನು ಹಾಗೂ ಕಳುವಾದ ಒಂದು ವಡವೆ ಸಿಕ್ಕಿರುತ್ತದೆ ಎಂದು ಹೇಳಿರುತ್ತಾರೆ. ನಾನು ಪೊಲೀಸ ಠಾಣೆಗೆ ಹೋದಾಗ ಆರೋಪಿತ ಮಂಜುನಾಥನನ್ನು ಹಾಗೂ ಪದಕದ ವಡೆಯನ್ನು ತೋರಿಸಿರುತ್ತಾರೆ. ಸದರಿ ಆರೋಪಿತನು ತಾನು ಹಾಗೂ ಆರೋಪಿತನ 1 ರಿಂದ 3 ಸೇರಿ ಕಳ್ಳತನ ಮಾಡಿರುತ್ತೆವೆ ಎಂದು ಹೇಳಿರುತ್ತಾನೆ. ಕೀಲಿ ಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ತೋರಿಸಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.